ಸೈನ್ಸ್ ಎರಡನೇ ವರ್ಷದಲ್ಲಿ ಓದುತ್ತಿದ್ದ. ಇನ್ನೊಬ್ಬ ಪರುಶುರಾಮ ಗೌಡ, ಎಂ.ಎ. ತತ್ವಶಾಸ್ತ್ರ ಮೊದಲನೇ ವರ್ಷದ ವಿದ್ಯಾರ್ಥಿಯಾಗಿದ್ದ. ಸೊಳ್ಳೆ ಕಾಟದಲ್ಲೇ ರಾತ್ರಿ ಪೂರ್ತಿ ಸೆಲ್‌ನಲ್ಲಿ ಕಾಲ ಕಳೆದಿದ್ದೆವು. ಬೆಳಿಗ್ಗೆ ಎಂಟು ಗಂಟೆಗೆ ಪೊಲೀಸ್ ಠಾಣೆಯ ಟಾಯ್ಲೆಟ್‌ನಲ್ಲಿ ಮುಖ ತೊಳೆಯುವ ಕಾಯಕವೂ ಮುಗಿದಿತ್ತು. ನಮ್ಮ ನಮ್ಮ ಕರ್ಚೀಪುಗಳಲ್ಲೇ ಮುಖಗಳನ್ನು ಒರೆಸಿಕೊಂಡಿದ್ದೆವು. ನಮ್ಮ ಎದುರಿನಲ್ಲಿ ಓಡಾಡುತ್ತಾ ಪೊಲೀಸರು ಬಿಸಿಬಿಸಿ ಕಾಫಿ ಕುಡಿಯುತ್ತಿದ್ದರೂ ಕನಿಷ್ಠ ನಮ್ಮನ್ನು ಕಾಫಿ ಕುಡಿಯುವಿರಾ ಎಂದು ಕೂಡ ವಿಚಾರಿಸಿರಲಿಲ್ಲ. ಒಂಬತ್ತು ಗಂಟೆಗೆ ನಾಲ್ಕು ಜನಕ್ಕೂ ಎರಡೆರಡು ಇಡ್ಲಿ ಚಟ್ನಿ ಕೊಟ್ಟಿದ್ದರು. ನಮಗ್ಯಾರಿಗೂ ಎರಡೆರಡು ಇಡ್ಲಿಗಳು ಸಾಕಾಗಿರಲಿಲ್ಲ. ಹೊಟ್ಟೆ ಮತ್ತಷ್ಟು ಆಹಾರವನ್ನು ಬಯಸುತ್ತಿತ್ತು. ಮಧ್ಯಾಹ್ನ ನಮಗೆ ಯಾವ ಊಟವನ್ನೂ ಕೊಟ್ಟಿರಲಿಲ್ಲ. ಒಂದೊಂದು ಗ್ಲಾಸ್ ನೀರು ಕೊಟ್ಟ ಪೊಲೀಸ್ ಪೇದೆಯೊಬ್ಬ 'ಚಿಂತಿಸಬೇಡಿ, ರಾತ್ರಿಗೆ ಹೊಟ್ಟೆ ತುಂಬಾ ಊಟ ಕೊಡಲಾಗುವುದು. ನಾಳೆ ಬೆಳಿಗ್ಗೆಯೇ ಡಿಸಿಪಿ ಸಾಹೇಬರು ಬರುವ ಪ್ರೋಗ್ರಾಂ ಖಾಯಂ ಆಗಿದೆ. ಇನ್ನು ಮುಂದೆ ಇಂಥ ಕೆಲಸಗಳನ್ನು ಮಾಡುವುದಿಲ್ಲವೆಂದು ಸಾಹೇಬರ ಕಾಲಿಗೆ ಬಿದ್ದು ಕೇಳಿಕೊಳ್ಳಿ. ಸಾಹೇಬರು ಒಳ್ಳೆಯವರು. ಅವರು ಎಸಿಪಿಯಾಗಿದ್ದಾಗ ನಾನವರ ಕೈಕೆಳಗೆ ಕೆಲಸ ಮಾಡಿದ್ದೆ. ಮಾತು, ನೋಟ ಒರಟಾದರೂ ಮನಸ್ಸು ಮಾತ್ರ ತುಂಬಾ ಮೃದು' ಎಂದು ನಮಗೆ ಸಾಂತ್ವನ ಹೇಳುವವನಂತೆ ಮಾತನಾಡಿದ್ದ. ನಾವು ಒಂದಿಷ್ಟೊತ್ತು ಮಾತನಾಡುವುದು, ಒಂದಿಷ್ಟೊತ್ತು ತೂಕಡಿಸುವುದೂ ಮಾಡುತ್ತಾ ಕಾಲ ನೂಕಿದ್ದೆವು. ರಾತ್ರಿ ಎಂಟೂವರೆಗೆ ಪೇದೆಯೊಬ್ಬ ಸೆಲ್ ನ ಬಾಗಿಲ ಬಳಿ ನಿಂತು. 'ನಿಮ್ಮಲ್ಲಿ ಯಾರು ವೆಜಿಟೇರಿಯನ್ ಯಾರು ನಾನ್ ವೆಜಿಟೇರಿಯನ್?' ಎಂದು ಕೇಳಿದ್ದ. ಹಸಿವು ಎಷ್ಟು ಕ್ರೂರವಾದದ್ದೆಂದು ಮೊದಲ ಬಾರಿಗೆ ನನಗೆ ಅರಿವಾಗಿತ್ತು. ನಾನೂ ಮತ್ತು ಪರುಶುರಾಮ ಗೌಡ ನಾನ್ ವೆಜಿಟೇರಿಯನ್ ಎಂದು ಹೇಳಿದರೆ, ಜಿ.ವಿ. ಹೆಗಡೆ ಮತ್ತು ಪ್ರಮೋದ್ ಶಾಸ್ತ್ರಿ ವೆಜಿಟೇರಿಯನ್ ಎಂದು ಹೇಳಿದ್ದರು. ಒಳ್ಳೆಯ ಊಟ ಕೊಡಬಹುದೆಂದು ನಮ್ಮೆಲ್ಲರಿಗೂ ನಿರೀಕ್ಷೆ ಹುಟ್ಟಿತ್ತು. ಒಂಬತ್ತು ಗಂಟೆಗೆ ಇಬ್ಬರು ಪೊಲೀಸ್ ಪೇದೆಗಳು ತಲಾ ಎರಡೆರಡು ತಟ್ಟೆ ಹಿಡಿದು ಬಂದಿದ್ದರು. ನಾಲ್ಕು ಊಟಗಳಲ್ಲಿ ಮೂರು ನಾನ್ ವೆಜಿಟೇರಿಯನ್ ಊಟವಿದ್ದರೆ ಒಂದು ತಟ್ಟೆಯಲ್ಲಿ ಬಿಸಿ ಬಿಸಿ ಅನ್ನ, ಸಾಂಬಾರ್ ಮತ್ತು ಗಟ್ಟಿ ಮೊಸರು ಇತ್ತು. ನನಗೆ ವೆಜಿಟೇರಿಯನ್ ಊಟ ಕೊಟ್ಟು ಮಿಕ್ಕವರಿಗೆ ನಾನ್ ವೆಜ್ ಊಟ ಕೊಟ್ಟಿದ್ದರು. ಅಲ್ಲದೆ ಅವರ ಮುಂದೆಯೇ ನಾವು ಊಟ ಮಾಡಬೇಕೆಂದು ಹೇಳಿ ನಮ್ಮೆದುರು ನಿಂತಿದ್ದರು. ಹಸಿವಿನಿಂದ ತಟ್ಟೆಗೆ ಕೈಯಿಟ್ಟ ಜಿ.ವಿ. ಹೆಗಡೆ ಒಮ್ಮಲೆ ವಾಕರಿಸಿಕೊಂಡು ತಟ್ಟೆಯನ್ನು ಕೆಳಗಿಟ್ಟ. 'ದೇಶವನ್ನು ರಕ್ಷಿಸಬೇಕೆಂದರೆ ನಾವು ಮಾಂಸಹಾರ ಸೇವಿಸಿ ಗಟ್ಟಿಯಾಗಬೇಕೆಂದು ಸ್ವಾಮಿ ವಿವೇಕಾನಂದರು ಹೇಳಿರುವುದು ಗೊತ್ತಿರಬೇಕು ನಿಮಗೆ. ಮಾಂಸಾಹಾರ ತಿಂದು ದೇಶವನ್ನು ರಕ್ಷಿಸಿಕೊಳ್ಳಿ' ಎಂದು ಹೇಳಿ ಕಪ್ಪಗೆ ದಪ್ಪಗೆ ಇದ್ದ ಪೇದೆ ನಕ್ಕಿದ್ದ. ನನಗೆ ಅದೆಂತಹ ಧೈರ್ಯ ಬಂತೋ; ಮೂರ್ನಾಲ್ಕು ದಿನಗಳ ಹಿಂದೆ ತಾನೇ ಊರಿನಿಂದ ಬಂದ ನನ್ನ ಜೇಬಿನಲ್ಲೂ ದುಡ್ಡಿತ್ತು. ಜೇಬಿಗೆ ಕೈಯಿಟ್ಟು ಐವತ್ತು ರೂಪಾಯಿಯ ಎರಡು ನೋಟುಗಳನ್ನು ತೆಗೆದು ಇಬ್ಬರು ಪೇದೆಗಳ ಕೈಯ್ಯಲ್ಲೂ ಒಂದೊಂದು ನೋಟನ್ನು ಇಟ್ಟಿದ್ದೆ. ತಕ್ಷಣ ಏನೂ ನಡೆದೇ ಇಲ್ಲವೇನೋ ಎಂಬಂತೆ ಪೇದೆಗಳಿಬ್ಬರೂ ಪಕ್ಕಕ್ಕೆ ಹೊರಟು ಹೋಗಿದ್ದರು. ಕೂಡಲೇ ನನ್ನ ತಟ್ಟೆಯನ್ನು ಹೆಗಡೆಗೆ ಕೊಟ್ಟು ಅವನ ತಟ್ಟೆಯನ್ನು ನಾನು ತೆಗೆದುಕೊಂಡಿದ್ದೆ. ಹೆಗಡೆ ಅನ್ನ ಸಾಂಬಾರು, ಮೊಸರನ್ನು ಗಬಗಬ ತಿಂದು ಮುಗಿಸಿದ್ದ. ಪ್ರಮೋದ್ ಶಾಸ್ತ್ರಿಗೆ ಆಗಾಗ ನಾನ್ ವೆಜ್ ತಿಂದು ರೂಢಿಯಿದ್ದರಿಂದ ಬಲವಂತವಾಗಿ ತಿಂದು ಹೊಟ್ಟೆ ತುಂಬಿಸಿಕೊಂಡಿದ್ದ. ಪರುಶುರಾಮ ಗೌಡ ಊಟ ಮಾಡುತ್ತಾ 'ಸುವರ್ ನನ್ಮಕ್ಳು ಹಂದಿ ಮಾಂಸದ ಜೊತೆಗೆ ದನದ ಮಾಂಸವನ್ನೂ ಮಿಕ್ಸ್ ಮಾಡಿ ಕೊಟ್ಟಿದ್ದಾರೆ. ಶಿವಾಜಿನಗರದ ಹೋಟೆಲ್ ಒಂದರಲ್ಲಿ ಎಳೆ ಕರುವಿನ ಮಾಂಸವನ್ನು ಫ್ರೈ ಮಾಡಿ ಕೊಡ್ತಾರೆ. ನನ್ನ ಕ್ಲಾಸ್ ಮೇಟ್ ಮಹದೇವನ ಜೊತೆ ಹೋಗಿ ಐದಾರು ಸಾರಿ ತಿಂದು ಬಂದಿದ್ದೀನಿ. ಬಹುಶಃ ಈ ಊಟವನ್ನು ಅಲ್ಲಿಂದಲೇ ತರಿಸಿರಬೇಕೆಂಬ ಅನುಮಾನ ನನಗೆ' ಎಂದು ಊಟ ಮಾಡಿ ಮುಗಿಸಿದ್ದ. 'ಮಾಂಸ ಹಂದಿಯದ್ದಾದರೇನು, ದನದ್ದಾದರೇನು, ನಾಯಿಯದ್ದಾದರೇನು, ಮನುಷ್ಯರದ್ದಾದರೇನು? ನೆಪೊಲಿಯನ್ ಬೋನಾಪಾರ್ಟೆ ಹಸಿವು ತಾಳಲಾರದೆ ಕೊಳೆತ ಮನುಷ್ಯನ ಹೆಣ ಕಿತ್ತು ತಿಂದಿದ್ದನಂತಲ್ಲ'